# ನಮ್ಮೀ ನಾಡು

'ನಿನ್ನೆ ಹಿರೋಶಿಮಾ ಕ್ಷಣಾರ್ಧದಲ್ಲಿ ಹೋಮ ವಾಯ್ತು ಇಂದು ವಿಯತ್ನಾಮಿನಗ್ನಿಕುಂಡ ನಾಳೆಮತ್ತೆಲ್ಲೊಬಗ್ಗನೆಹೊತ್ತಿಕೊಳ್ಳುವಹತ್ಯಾಕಾಂಡ ಆಹುತಿಯನ್ನಿತ್ತಷ್ಟು ಹಸಿವ ಅಗ್ನಿಕುಂಡ'.

ಇವು ಯುದ್ಧ ಕುರಿತು ಬರೆದ ಗಂಗಾಧರ ಚಿತ್ತಾಲರ ಕವಿತೆಯ ಸಾಲುಗಳು. ಯುದ್ಧಗಳು ಒಂದಿಲ್ಲೊಂದು ಕಾರಣಕ್ಕೆ ಎಲ್ಲಾ ದೇಶಗಳ ಸ್ವಾಸ್ಥ್ಯವನ್ನು ಹಾಳುಗೆಡವುತ್ತವೆ. ಉಕ್ರೇನಿನ ಮೇಲೆ ರಷ್ಯಾ ಒಂದೇ ಸಮನೆ ಅಸ್ತ್ರಗಳ ಸುರಿಮಳೆ ಮಾಡುತ್ತಿದೆ. ದೀಪಾವಳಿಯಲ್ಲಿ ಕೊಂಡುತಂದ ಪಟಾಕಿಗಳನ್ನು ಒಂದನ್ನೂ ಬಿಡದೆ ಸುಟ್ಟೇ ತೀರಬೇಕು ಎಂಬ ಮಗುವಿನಂತೆ ರಷ್ಯಾ ಬಿಡುವು ಕೊಡದೆ ಅಸ್ತ್ರಗಳ ಮಳೆ ಸುರಿಸುತ್ತಿದೆ. ಇಂತಹ ಸಂದರ್ಭದಲ್ಲಿ ತಟಸ್ಥ ನೀತಿ, ಅಲಿಪ್ತ ರಾಷ್ಟ್ರಗಳೆಂಬ ಎಂಬ ಪದಗಳು ಯಾವ ಅರ್ಥವನ್ನು ಪಡೆಯಬಹುದು.

ಆದಿಪುರಾಣದಲ್ಲಿ ಭರತ, ಬಾಹುಬಲಿ ಯುದ್ಧ ಪ್ರಸಿದ್ಧವಾದುದು. ಚಕ್ರವರ್ತಿ ಎಂದು ಕರೆಸಿಕೊಳ್ಳಲು ಭರತ ತಂದೆ ಹಂಚಿಕೊಟ್ಟ ರಾಜ್ಯವನ್ನು ನೂರು ಸಹೋದರರ ಜೊತೆ ಬಾಹುಬಲಿಯನ್ನೂ ಸೇರಿಸಿ ಶರಣಾಗುವಂತೆ ನಿರೂಪ ಕಳಿಸುತ್ತಾನೆ. ಆತ್ಮಾಭಿಮಾನಿಯಾದ ಬಾಹುಬಲಿ ಹಿರಿಯಣ್ಣನಿಗೆ ನಮಸ್ಕರಿಸುವುದು ಅಪಮಾನವೂ ಅಲ್ಲ, ಅಪಜಯವೂ ಅಲ್ಲ. ನೆತ್ತಿಗೆ ಕತ್ತಿಯನ್ನು ಚುಚ್ಚಿ ನಮಸ್ಕರಿಸುವಂತೆ ಮಾಡಿದರೆ ಅದು ಅಪಮಾನವಲ್ಲವೇ ಎಂದು ನಿರ್ಧರಿಸಿ ಯುದ್ಧವನ್ನೇ ಆರಿಸಿಕೊಳ್ಳುತ್ತಾನೆ. ಯುದ್ಧದಲ್ಲಿ ಗೆಲ್ಲಬೇಕಾದ ಭರತ ಸೋತು ತಲೆತಗ್ಗಿಸಿದರೆ, ಬಾಹುಬಲಿ ತನ್ನ ಪಕ್ಕದಲ್ಲಿ ಶರಣು ಬಂದ ಚಕ್ರರತ್ನವನ್ನು, ತಲೆಬಾಗಿಸಿ ನಿಂತ ಅಣ್ಣನನ್ನು ಕಾಣುತ್ತಾನೆ.

ಬಿ.ಎಂ.ಶ್ರೀ. ಅವರು ರಾಬರ್ಟ್ ಸೌದಿ ಎಂಬ ಕವಿಯ 'ಬ್ಲೆನ್ ಹೀಮ್' ಎಂಬ ಯುದ್ಧ ಕುರಿತಾದ ಕವನವೊಂದನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಅಜ್ಜ ಕುಳಿತಿದ್ದ ಹಟ್ಟಿಯ ಬಾಗಿಲಲಿ ಆಟವಾಡುತ್ತಿದ್ದ ಮೊಮ್ಮಗಳು ತನ್ನ ಅಣ್ಣ ಕಾಲಿಂದ ಬೆಳ್ಳಗೆ, ಗುಂಡಗೆ, ದಪ್ಪನಾದ ವಸ್ತುವೊಂದನ್ನು ಉರುಳಿಸುತ್ತಾ ಬರುವುದನ್ನು ಕಾಣುತ್ತಾಳೆ. ಅದೇನೆಂದು ಅಜ್ಜನನ್ನು ಕೇಳಿದಾಗ ಅವನು ಇದು ಯುದ್ಧದಲ್ಲಿ ಪ್ರಾಣ ಕಳೆದುಕೊಂಡವರ ತಲೆಯೋಡು ಎನ್ನುತ್ತಾನೆ. ಯಾವ ಕಾರಣಕ್ಕೋ ಕಾಣೆ – ಫ್ರೆಂಚ್ ಮತ್ತು ಇಂಗ್ಲಿಷರ ನಡುವೆ ಕದನ ನಡೆದು ಇಂತಹ ಸಾವಿರಾರು ತಲೆಯೋಡುಗಳು ನಮ್ಮ ತೋಟದಲ್ಲಿ ನೇಗಿಲಿನ ಕುಳಕ್ಕೆ ಸಿಕ್ಕಿ ಹೊರಬಂದಿವೆ ಎನ್ನುತ್ತಾನೆ. ಕೊನೆಗೆ ಮೊಮ್ಮಗ, 'ಸರಿಯಜ್ಜಾ, ಕೊನೆಗೆ ಈ ಯುದ್ಧದಿಂದ ಒಳಿತೇನಾಯ್ತು' ಎಂದಾಗ ಮುದುಕನಿಗೆ ಉತ್ತರ ಹೇಳಲು ತಿಳಿಯುವುದಿಲ್ಲ. 'ಅದ ನಾನು ಬಲ್ಲನೆ? ಯಾರನೆ ಕೇಳದು ಲೋಕ ಪ್ರಸಿದ್ಧಿಯ ಜಯವೆಂಬರೆಂದ' ಎನ್ನುತ್ತಾನೆ.

ಎಷ್ಟೋ ಬಾರಿ ಯುದ್ಧ ಯಾತಕ್ಕಾಗಿ ನಡೆಯುತ್ತದೆ ಎಂಬುದು ಸಾಮಾನ್ಯ ಜನರಿಗೆ ತಿಳಿದಿರುವುದೇ ಇಲ್ಲ. ಅಲ್ಲಿ ಬಾಂಬುಗಳ ಸ್ಫೋಟ ಮಾತ್ರವಲ್ಲ, ನಮ್ಮೊಳಗೇ ಸ್ಫೋಟಗೊಳ್ಳುವ ಹಲವು ಹತ್ಯಾರಗಳಿವೆ. ಭಾರತದಂತಹ ಬಹುತ್ವ ರಾಷ್ಟ್ರದಲ್ಲಿ ಅನೇಕತೆಯಲ್ಲಿ ಏಕತೆ ಕಾಣಬೇಕೆಂದು ಹಂಬಲಿಸಿದೆವು, ಹಾಡಿದೆವು, ಹರಸಿದೆವು. ಆದರೆ ಇಂದೇನಾಗಿದೆ. ಕಾಲಚಕ್ರ ಹಿಂದಕ್ಕೆ ಬರ್ಬರ ದಾಳಿಗಳ ಚರಿತ್ರೆಯ ಕಡೆಗೆ ಸಾಗುತ್ತಿದೆ.

ನಾವು ಏನಾಗುತ್ತಿದ್ದೇವೆ ಮತ್ತು ಎಲ್ಲಿಗೆ ತಲುಪುತ್ತಿದ್ದೇವೆ. ಮಾನವತ್ವ ಇರುವವರಿಗೆ ಸದಾ ಕಾಡುವ ಪ್ರಶ್ನೆಯಿದು. ಇತ್ತೀಚೆಗೆ ತಾನೆ ಕೋರ್ಟುಕಟ್ಟಲೆಯ ಕಾರಣಕ್ಕೆ ತಮ್ಮದೇ ಕೋಮಿನವರಿಂದ ಬಹಿಷ್ಕೃತರಾದ ಮೂವರು ಹಿರಿಯರ ಕತೆ ಓದಿದೆವು. ಬಹಿಷ್ಕಾರ ಎನ್ನುವುದು ಅಷ್ಟು ಸುಲಭವೇ. ಕಾಲಾನುಕಾಲದಿಂದಲೂ ಸೌಹಾರ್ದತೆಯಿಂದ ವ್ಯಾಪಾರ ವಹಿವಾಟು ನಡೆಸುತ್ತಿದ್ದವರನ್ನು ಹಿಂದೂ ಮುಸ್ಲಿಂ ಎಂದು ಪ್ರತ್ಯೇಕಿಸಲಾಗುತ್ತಿದೆ. ಹರ ಕೊಲ್ಲಲ್ ಪರ ಕಾಯ್ವನೆ ಎಂಬಂತೆ ನಾವೀಗ ಬದುಕುತ್ತಿದ್ದೇವೆ.

ಕಾಲದ ಕಟ್ಟಲೆಯನ್ನು ಯಾರು ಮೀರಲಾಗುವುದಿಲ್ಲ. ಉತ್ಸರ್ಪಿಣಿ ಮತ್ತು ಅವಸರ್ಪಿಣಿ ಎಂದು ನಮ್ಮ ಕವಿಗಳು ಕಾಲವನ್ನು ಒಳ್ಳೆಯ ಕಾಲ, ಅಪದೆಸೆಗೆ ಜಾರುವ ಕಾಲ ಎಂದು ವಿಂಗಡಿಸಿ ಮಾತನಾಡಿದರು. ಹೀಗಾಗಿ ಒಂದು ದೇಶದ ಒಳ್ಳೆಯತನ ಹಾಗೂ ಕೆಟ್ಟತನವೆಂಬುದು ಆಳುವ ಪ್ರಭುವನ್ನು ಅವಲಂಬಿಸಿರುತ್ತದೆ. ಅರಸ ಗದ್ದಿಗೆಯಿಂದ ಇಳಿದು ಸಾಮಾನ್ಯನಾಗಬಾರದು, ದೇವತೆ ಗರ್ಭಗುಡಿ ಬಿಟ್ಟು ಹೊರಬರಬಾರದು ಎಂಬುದು ಈ ವ್ಯವಸ್ಥೆಯನ್ನು ಕಾಯುವವರ ನಿರೀಕ್ಷೆ.

ಕಾಲದ ಸಂಕೋಲೆಗಳು ನಿಯಂತ್ರಣಕ್ಕೆ ಒಳಗಾದಾಗ ಕಟ್ಟಲೆಯಾಗುತ್ತದೆ. ಕಟ್ಟಲೆ ನಿಯಮವೆಂಬ ಅರ್ಥವನ್ನು ಪಡೆಯುತ್ತದೆ. ಲೌಕಿಕ ಸಂಗತಿಗಳು ಕಾಲದ ಕಟ್ಟಲೆಯನ್ನು ಮೀರಲು ಸಾಧ್ಯವಿಲ್ಲ ಎಂಬ ಸತ್ಯವನ್ನು ಅಲ್ಲಮ – 'ಗುಹೇಶ್ವರಾ ನಿಮ್ಮ ಕಾಲದ ಕಟ್ಟಲೆಯ ಕಲಿತನಕ್ಕೆ ನಾನು ಬೆರಗಾದೆನು' ಎನ್ನುತ್ತಾನೆ. ಈ ಕಾಲದ ಕಟ್ಟಲೆಯನ್ನು ಅಡಿಗರು 'ಇದು ನಮ್ಮೀ ನಾಡು' ಎಂಬ ಕವಿತೆಯಲ್ಲಿ ಗತಕಾಲದ ಶ್ರೀಮಂತಿಕೆ, ವಿಜೃಂಭಣೆಯಲ್ಲಿ ಮೈಮರೆತಿರುವ ನಾವು ವಾಸ್ತವದಿಂದ ದೂರವಾಗಿದ್ದೇವೆ, ಗತಕಾಲವನ್ನು ಕೆದಕುವುದರಲ್ಲೇ ನಮ್ಮ ಶ್ರಮ ವ್ಯಯವಾಗುತ್ತಿದೆ ಎಂಬ ಸತ್ಯವನ್ನು ಹಿಡಿದಿಡುತ್ತಾರೆ. ಗತಕ್ಕೆ ಜೀವವಿಲ್ಲ, ಅದು ಕೇವಲ ಚರಿತ್ರೆ ಎಂಬುದನ್ನು ನಾವು ಗ್ರಹಿಸುತ್ತಿಲ್ಲ ಎಂಬ ಅವರ ಕಾಳಜಿ ವ್ಯಂಗ್ಯ ರೂಪದಲ್ಲಿ ವ್ಯಕ್ತವಾಗುತ್ತದೆ. 'ಹುಳುಕು ತೊಗಟೆಗೆ ಹೊದೆಸು ಅಪರಂಜಿ ತಗಡ; ಮೈಮೇಲೆ ಕೆತ್ತಿಸು ಇದರ ಪೂರ್ವ ಕತೆಯ ಇಲ್ಲಿ ನೆರಳಿತ್ತು, ಹಸಿರೆಲೆತಳಿರು ಹೂ ಮಣ್ಣು ಕೋಗಿಲೆಯ ಸರವಿತ್ತು, ಗಿಳಿಯ ನಿಲಯ.'

ಸತ್ತ ಮರವನು ಎತ್ತಿ ನಿಲ್ಲಿಸಿ, ಮರೆತ ಗಾಯಗಳನು ಕೆದಕಿ, ನಿರ್ಜೀವ ಹೆಣಕ್ಕೆ ಜೀವ ತುಂಬುವ ವ್ಯರ್ಥ ಪ್ರಯತ್ನ ಯಾಕೆ ಎಂಬ ಚಿಂತನೆಯನ್ನು ಸತ್ತಮರದ ರೂಪಕದ ಮೂಲಕ ಅಡಿಗರು ಕಟ್ಟಿಕೊಡುತ್ತಾರೆ. ಇದು ಎಲ್ಲಾ ಪ್ರಜ್ಞಾವಂತರ ಪ್ರಶ್ನೆಯೂ ಹೌದು. ಮತ್ತೆ ಮತ್ತೆ ಚಿಂತಿಸಬೇಕಾದ ಚರಿತ್ರೆಯ ವ್ಯಂಗ್ಯವೂ ಹೌದು.

■ **ಅಮೃತಮತಿ**

## ಮಾತೇ ಮುತ್ತು

- ಎಲ್ಲರೂ ತಮ್ಮ ತಮ್ಮ ಬುದ್ಧಿಗೆ ತೋಚಿದ್ದನ್ನು, ತಮಗೆ ಉತ್ತಮವೆಂದು ತೋರಿದ ಕ್ರಮದಲ್ಲಿ ಚೆನ್ನಾಗಿಯೇ ಹೇಳುತ್ತಾರೆ. ವಿದ್ಯೆ ಲೋಕದಲ್ಲಿ ಯಾರೋ ಒಬ್ಬರಿಗಾಗಿ ಬಂದುದಲ್ಲ. ಲೋಕವನ್ನು ಮೆಚ್ಚಿಸಲು ಪರಮೇಶ್ವರನಿಗಾದರೂ ಸಾಧ್ಯವೆ? ಆಡುವವರು ತಮ್ಮ ಹಮ್ಮಿಗಾಗಿ ಆಡುತ್ತಾರೆ. ಕೆಟ್ಟ ಮಾತಿನ ಭಯದಿಂದ ಕೆಟ್ಟವನ ಮೇಲೆ ಏಕೆ ಅನುಮಾನ ಪಡಬೇಕು?

  –ಚೌಂಡರಸ

- ಜನರಿಗೆ ಹಿರಿಯರಿಂದ ಬರುವ ಆಸ್ತಿಯಲ್ಲಿ ಭಾಷೆಯೂ ಒಂದು. ಅದು ಚೆನ್ನಾಗಿದ್ದಷ್ಟೂ ಭೂಷಣ.

  –ಬಿಎಂಶ್ರೀ

- ನೊಣಗಳು ನಮ್ಮ ಸುಂದರವಾದ ಇಡೀ ದೇಹವನ್ನು ಬಿಟ್ಟು ಗಾಯದ ಮೇಲೆಯೇ ಕುಳಿತುಕೊಳ್ಳುವ ಹಾಗೇ ಕೆಲವರು ನಮ್ಮಲ್ಲಿರುವ ಸದ್ಗುಣಗಳನ್ನು ತಳ್ಳಿಹಾಕಿ ಲೋಪದೋಷಗಳನ್ನು ಮಾತ್ರ ಹುಡುಕುತ್ತಾರೆ.

  –ಎ.ಪಿ.ಜೆ. ಅಬ್ದುಲ್ ಕಲಾಂ

- ದುಡಿ, ಮೈ ಮುರಿದು ದುಡಿ. ಹೆಚ್ಚು ಹೆಚ್ಚಾಗಿ ದುಡಿ. ಆ ನಿನ್ನ ದುಡಿಮೆಯಲ್ಲಿ ಶ್ರಮವಿರಲಿ. ನಿಯಮವಿರಲಿ, ಗುರಿ ಇರಲಿ, ವಿವೇಚನೆ ಇರಲಿ, ದಕ್ಷತೆ ಇರಲಿ.

  –ಎಂ. ವಿಶ್ವೇಶ್ವರಯ್ಯ

- ವರ್ಣಾಶ್ರಮ, ಜಾತಿಪದ್ಧತಿ, ಮೇಲು ಕೀಳು ಭಾವನೆ ಮೊದಲಾದ ಮನೋಭಾವ ಮಧ್ಯಯುಗದ ಕ್ರೂರ ಕರಾಳ ತತ್ವಗಳೆಲ್ಲ ವೈಜ್ಞಾನಿಕ ದೃಷ್ಟಿಯ ಅಗ್ನಿಕುಂಡದಲ್ಲಿ ಭಸ್ಮೀಕೃತವಾಗಬೇಕು.

  –ಕುವೆಂಪು

- ಜೀವನ ಸುಂದರ ಸ್ವಪ್ನವೂ ಅಲ್ಲ, ಕಹಿ ಬೇವೂ ಅಲ್ಲ; ಬೇವು–ಬೆಲ್ಲಗಳ ಮಿಶ್ರಣ ಅದು. ಅರೆ ಕಹಿ, ಅರೆ ಸಿಹಿ, ಸ್ವಲ್ಪ ನಗು, ಕೊಂಚ ಅಳು; ತುಸು ಕೋಪ, ನಸು ತಾಪ. ನೀನದನ್ನು ನಗುನಗುತ್ತ ನುಂಗಬೇಕು, ನೋವನ್ನು ನಗೆಯಾಗಿ ಪರಿವರ್ತಿಸಿಕೊಳ್ಳಬೇಕು.

  –ನಾಡಿಗೇರ ಕೃಷ್ಣರಾಯರು